ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 38/2018 ಸಿಡಬ್ಲ್ಯೂ: 23 ಪಿ ಡಬ್ಲ್ಯೂ: 7**

| | |
|---|---|
| ಹೆಸರು | ರವೀಂದ್ರ ಸಿ ಎಂ |
| ತಂದೆಯ ಹೆಸರು | ಮರಿಗೌಡ |
| ವಯಸ್ಸು | 46 ವರ್ಷ |
| ವೃತ್ತಿ | ಪೊಲೀಸ್ ಇನ್ಸ್ ಪೆಕ್ಟರ್, ಕೋಣಾಜೆ, ಮಂಗಳೂರು |
| ವಾಸ | ಮಂಗಳೂರು |

ದಿನಾಂಕ: 23.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:

1. ನಾನು 2017 ಅಕ್ಟೋಬರ್ ನಿಂದ ಜನವರಿ 2019 ರವರೆಗೂ ಶ್ರೀರಂಗಪಟ್ಟಣದ ವೃತ್ತ ಕಚೇರಿಯಲ್ಲಿ ಆರಕ್ಷರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕ: 17.01.2018 ರಂದು ಈ ಕೇಸಿನ ಕಡತವನ್ನು ಚಾಸಾ 22 ರವರಿಂದ ಪಡೆದು ತನಿಖೆಯನ್ನು ಪರಿಶೀಲಿಸಿ, ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಅಪಘಾತಕ್ಕೊಳಗಾದ ಕೆಎ-40-ಎಫ್-1054 ಮತ್ತು ಕೆಎ-09-ಹೆಚ್ ಎನ್- 8003 ವಾಹನಗಳನ್ನು ಐ ಎಂ ವಿ ತಪಾಸಣೆಗಾಗಿ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಕೆ ಎಸ್ ಆರ್ ಟಿ ಸಿ ಬಸ್ ನ ಟ್ರಾಫಿಕ್ ಕಂಟ್ರೋಲರ್ ಚಾಸಾ 17 ರವರು ವಾಹನದ ದಾಖಲಾತಿ ಮತ್ತು ಆರೋಪಿಯೊಂದಿಗೆ ಕಚೇರಿಗೆ ಹಾಜರಾಗಿದ್ದು, ದಾಖಲಾತಿಗಳನ್ನು ಪರಿಶೀಲಿಸಿ ಇಂಡೆಮಿನಿಟಿ ಬಾಂಡ್ ಪಡೆದು ಕಲಂ 133 ರೀತ್ಯಾ ನೋಟೀಸು ನೀಡಿ, ಉತ್ತರ ಪಡೆದುಕೊಂಡು ಕೆ ಎಸ್ ಆರ್ ಟಿ ಸಿ ಬಸನ್ನು

ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಬಸ್ ಚಾಲಕರನ್ನು ದಸ್ತಗಿರಿ ಮಾಡಿ, ಜಾಮೀನು ಮುಚ್ಚಳಿಕೆ ಪಡೆದು ಬಿಡುಗಡೆ ಮಾಡಿರುತ್ತೇನೆ. ದಿಃ 22.01.2018 ರಂದು ಆರ್ ಟಿ ಒ ಮಂಡ್ಯ ರವರಿಂದ ಐ ಎಂ ವಿ ವರದಿ ಪಡೆದಿರುತ್ತೇನೆ. ದಿಃ 21.01.2018 ರಂದು ಅಪಘಾತದ ದಿನ ಅಂದರೆ ದಿಃ 15.01.2018 ರಂದು ಸಂಜೆ 6.30 ರಿಂದ 7.30 ರವರೆಗೂ ಶ್ರೀರಂಗಪಟ್ಟಣಕ್ಕೆ ಬಂದು ಹೋಗಿರುವ ಬಸ್ ಗಳ ಬಗ್ಗೆ ಮಾಹಿತಿ ನೀಡುವಂತೆ ಪತ್ರ ವ್ಯವಹಾರ ಮಾಡಿರುತ್ತೇನೆ. ಅದರಂತೆ ಅವರು ಮಾಹಿತಿ ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 31.01.2018 ರಂದು ಅಪಘಾತದ ದಿನ ಸಂಜೆ 7.20 ಗಂಟೆ ಸಮಯದಲ್ಲಿ ಮಂಡ್ಯ ಕಂಟ್ರೋಲರ್ ರೂಂ ನಿಂದ ಮಾಹಿತಿ ನೀಡಿದ್ದ, ಲಾಗ್ ಪುಸ್ತಕದ ಮಾಹಿತಿಯನ್ನು ಪಡೆದಿರುತ್ತೇನೆ. ಈ ಪ್ರಕರಣ ಗಾಯಾಳು ಮರಿಯಯ್ಯ - ಚಾಸಾ 1 ರವರ ಗಾಯಾಳು ಪ್ರಮಾಣ ಪತ್ರವನ್ನು ನೀಡಿರುವಂತೆ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕೋರಿಕೆ ನೀಡಿದ್ದು, ಅದನ್ನು ಪಡೆದುಕೊಂಡಿರುತ್ತೇನೆ. ದಿಃ 03.02.2018 ರಂದು ಮೃತರ ಬಾಬ್ತು ಪಿ ಎಂ ವರದಿಯನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ದಿಃ 09.02.2018 ರಂದು ಸಾಕ್ಷಿದಾರರಾದ ಚಾಸಾ 5 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 05.03.2018 ರಂದು ಚಾಸಾ 6 ಮತ್ತು 7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 22.05.2018 ರಂದು ಅಪಘಾತಕ್ಕೀಡಾದ ಕೆಎ -09 ಹೆಚ್ ಎನ್ -8003 ಟಿ ವಿ ಎಸ್ ಮೋಟಾರ್ ಸೈಕಲ್ ನ ಆರ್ ಸಿ ಮಾಲೀಕರಾದ ಚಾಸಾ 18 ರವರು ದಾಖಲಾತಿಯೊಂದಿಗೆ ಹಾಜರಾಗಿದ್ದು, ಅವರಿಗೆ ಕಲಂ 133 ಐ ಎಂ ವಿ ನೋಟೀಸನ್ನು ಜಾರಿ ಮಾಡಿ ಉತ್ತರ ಪಡೆದಿರುತ್ತೇನೆ. ಅವರಿಂದ ಸೂಕ್ತ ದಾಖಲಾತಿಯನ್ನು ಪಡೆದು ವಾಹನವನ್ನು ಬಿಡುಗಡೆ

ಮಾಡಿರುತ್ತೇನೆ. ದಿಃ 22.05.2018 ರಂದು ಚಾಸಾ 2 ರಿಂದ 4 ರವರ ಮರುಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪ ಸಾಬೀತಾದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ವಾಹನಗಳನ್ನು ಬಿಡುಗಡೆ ಮಾಡುವ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಶವ ಪರೀಕ್ಷಾ ವರದಿಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಶವ ಪರೀಕ್ಷಾ ವರದಿಯನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಐ ಎಂ ವಿ ವರದಿಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಐ ಎಂ ವಿ ವರದಿಯನ್ನು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಲಾಗ್ ಪುಸ್ತಕದ ದೃಢೀಕೃತ ನಕಲು ಮತ್ತು ಅದರ covering letter ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಕಲಂ 41 ಸಿ ಆರ್ ಪಿ ಸಿ ರೀತ್ಯಾ ನೋಟೀಸನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಕಲಂ 133 ಸಿ ಆರ್ ಪಿ ಸಿ ರೀತ್ಯಾ ನೋಟೀಸನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಇಂಡೆಮಿನಿಟಿ ಬಾಂಡ್ ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 17 ಎಂದು, ಸಾಕ್ಷಿಯ

ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ7 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 7(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ಪೋಟೋಗೆ ಸಂಬಂಧಿಸಿದ ಸಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು ಗುರುತಿಸಲಾಗಿದೆ. ಸಾಕ್ಷಿ ಕೆ ಎಸ್ ಆರ್ ಟಿ ಸಿ ಅವರು ನೀಡಿರುವ authorization letter ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಕೆ ಎಸ್ ಆರ್ ಟಿ ಸಿ ಅವರು ನೀಡಿರುವ ದೃಡೀಕರಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 8 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 8(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 9 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 9(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 10 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 10(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 5 ಅನ್ನು ನೋಡಿ ಅದು ಅಪಘಾತಪಡಿಸಿದ ಬಸ್ ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎನ್ ವಿ ಆರ್ ವಕೀಲರಿಂದಃ

1. ಅಪಘಾತದ ದಿನ ಲಕ್ಷದೀಪೋತ್ಸವ ಇತ್ತು ಎಂದರೆ ಸರಿ. ಆ ದಿನ ಹೆಚ್ಚಿನ ಜನಸಂಖ್ಯೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಸೇರಿರುತ್ತಾರೆ ಎಂದರೆ ಸರಿ. ಅಪಘಾತವಾದ ರಸ್ತೆಯು ಮೈಸೂರು - ಬೆಂಗಳೂರು ಹೆದ್ದಾರಿಯಾಗಿದ ಕಾರಣ ಅಲ್ಲಿ ಹೆಚ್ಚು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಮೈಸೂರು-ಬೆಂಗಳೂರು ರಸ್ತೆ ಹಾಗೂ ಬೆಂಗಳೂರು ಮೈಸೂರು ರಸ್ತೆಯಲ್ಲಿ ಚೆಕ್ ಪೋಸ್

ಇದೆ ಎಂದರೆ ಮೈಸೂರಿನ ಕಡೆ ಇದೆ ಎಂದು ನುಡಿಯುತ್ತಾರೆ. ಚೆಕ್ ಪೋಸ್ಟ್ ನಲ್ಲಿ ಪೊಲೀಸ್ ಇರುತ್ತಾರೆ ಎಂದರೆ ಸರಿ. ಅಪಘಾತದ ದಿನ ಲಕ್ಷದೀಪೋತ್ಸವ ಇದ್ದ ಕಾರಣ ಹೆಚ್ಚು ಪೊಲೀಸ್ ನೇಮಕ ಮಾಡಲಾಗಿದೆ ಎಂದರೆ ಸಾಕ್ಷಿ ದೇವಸ್ಥಾನದ ಬಳಿ ಮಾಡಿದ್ದು, ಹೈವೇ ನಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಚೆಕ್ ಪೋಸ್ಟ್ ನಿಂದ ಸ್ವಲ್ಪ ದೂರದಲ್ಲಿ ಸಾಯಿ ಮಂದಿರ ಇದೆ ಎಂದರೆ ಸಾಕ್ಷಿ 50-60 ಮೀಟರ್ ದೂರದಲ್ಲಿದೆ ಎಂದು ನುಡಿಯುತ್ತಾರೆ. ಸೇತುವೆಯ ನಂತರ ಪಶ್ಚಿಮ ವಾಹಿನಿ, ರುಚಿ ಮನೆ ಹೋಟೇಲ್ ಮತ್ತು ಬಾಲಾಜಿ ಗಾರ್ಡನ್ ಇದೆ ಎಂದರೆ ಸರಿ. ಸಾಯಿ ಮಂದಿರದ ಪಕ್ಕದಲ್ಲಿ ಹಳ್ಳಿ ಮನೆ ಹೋಟೇಲ್ ಇದೆ ಎಂದರೆ ಸರಿ. ಹಳ್ಳಿ ಮನೆ ಹೋಟೇಲ್ ಮತ್ತು ಚೆಕ್ ಪೋಸ್ಟ್ ಎದುರು ಬದರು ಇದೆ ಎಂದರೆ ಸರಿ. ಲಕ್ಷದೀಪೋತ್ಸವ ಇರುವ ಕಾರಣ ಸಾಯಿ ಮಂದಿರ ಮತ್ತು ಲಕ್ಷ್ಮಿ ನರಸಿಂಹ ದೇವಸ್ಥಾನದಲ್ಲಿ ದೀಪಗಳನ್ನು ಹಚ್ಚುತ್ತಾರೆ ಎಂದರೆ ಸಾಕ್ಷಿ ಎಲ್ಲಾ ದೇವಸ್ಥಾನದಲ್ಲಿ ಹಚ್ಚುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಹೆಚ್ಚು ಜನರು ನಡೆದುಕೊಂಡು ಹೋಗಿ ಬರುತ್ತಾರೆ ಎಂದರೆ ಸರಿ.

2. ಆ ದಿನ ಸಂಕ್ರಾಂತಿ ಇದ್ದ ಕಾರಣ ಹೈವೇಯ ಒಂದು ರಸ್ತೆಯಲ್ಲಿ ದನ ಕಿಚ್ಚಾಯಿಸಲು ರಸ್ತೆ ಬ್ಲಾಕ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದನ ಕಿಚ್ಚಾಯಿಸುವುದರಿಂದ ಹೆಚ್ಚಿನ ಟ್ರಾಫಿಕ್ ಇದ್ದು, ಸುಮಾರು 1 ರಿಂದ 1ವರೆ ಗಂಟೆ ವಾಹನಗಳು ಜಾಮ್ ಆಗಿರುತ್ತದೆ ಎಂದರೆ ಸಾಕ್ಷಿ ಹೈವೇ ಅಲ್ಲಿ ದನ ಕಿಚ್ಚಾಯಿಸುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಹಬ್ಬ ಮತ್ತು ದೀಪೋತ್ಸವ ಇರುವ ಕಾರಣಕ್ಕೆ ಹೆಚ್ಚಿನ ಟ್ರಾಫಿಕ್ ಇರುತ್ತದೆ ಎಂದರೆ ಸರಿ. ಟ್ರಾಫಿಕ್ ಇರುವ ಕಾರಣ ಅತಿವೇಗವಾಗಿ ವಾಹನ ಚಲಾಯಿಸಲು ಆಗುವುದಿಲ್ಲ ಎಂದರೆ ಸರಿ.

3. ನಾನು ಕಡತವನ್ನು ಪಡೆದ ನಂತರ ದ್ವಿ ಚಕ್ರ ವಾಹನದ ಪೊಟೋ ಹಾಗೂ ಘಟನಾ ಸ್ಥಳದ ಪೋಟೋವನ್ನು ತೆಗೆಸಿರುವುದಿಲ್ಲ. ಸಾಮಾನ್ಯವಾಗಿ ಐ ಎಂ ವಿ ಮಾಡಿಸಲು ವಾಹನದ ನೋಂದಣಿ ಸಂಖ್ಯೆಯನ್ನು ಬರೆದು ಮನವಿ ಸಲ್ಲಿಸುತ್ತೇವೆ ಎಂದರೆ ಸರಿ. ಐ ಎಂ ವಿ ಮಾಡಿಸಲು ವಾಹನದ ಪೋಟೋವನ್ನು ಸಹ ಆರ್ ಟಿ ಒ ರವರಿಗೆ ನೀಡುತ್ತೇವೆ ಎಂದರೆ ಸರಿ. ನಾನು ಐ ಎಂ ವಿ ಮಾಡಿಸಲು ಆರ್ ಟಿ ಒ ಅವರಿಗೆ ನೀಡಿದ ದ್ವಿ ಚಕ್ರ ವಾಹನದ ಪೊಟೋವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ದಿಃ22.05.2018 ರಂದು ನನಗೆ ಅಪಘಾತಕ್ಕೊಳಗಾದ ದ್ವಿ ಚಕ್ರ ವಾಹನವು ಕೆಎ-09-ಹೆಚ್ ಎನ್-8004 ರ ಬದಲು ಕೆಎ-09-ಹೆಚ್ ಎನ್-8003 ಎಂದು ಆರ್ ಸಿ ಮಾಲೀಕರು ದಾಖಲಾತಿ ನೀಡಿದ ಮೇರೆಗೆ ಗೊತ್ತಾಯಿತು. ಅದರ ಪೂರ್ವದಲ್ಲಿ ವಾಹನದ ನಿಖರವಾದ ಸಂಖ್ಯೆಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಆರ್ ಸಿ ಮಾಲೀಕರಿಗೆ ನಾನೇ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸನ್ನು ನಾನು ದಿಃ 18.01.2018 ರಂದು ನೀಡಿರುತ್ತೇನೆ. ದಿಃ 18.01.2018 ರಂದೇ ನನಗೆ ದ್ವಿ ಚಕ್ರ ವಾಹನದ ಸಂಖ್ಯೆ ಕೆಎ-09-ಹೆಚ್ ಎನ್-8003 ಎಂದು ಗೊತ್ತಿದ್ದರೂ ಸಹ ನಾನು ಮೃತರ ಕುಟುಂಬಕ್ಕೆ ಅನುಕೂಲವಾಗಲಿ ಎಂಬ ದುರುದ್ದೇಶದಿಂದ ಸ್ಥಳ ಪಂಚನಾಮೆ ಮತ್ತು ದ್ವಿ ಚಕ್ರ ವಾಹನದ ಪೊಟೋಗಳನ್ನು ತೆಗೆಸಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೋಟೋವನ್ನು ಹಾಜರುಪಡಿಸಿದರೆ ನ್ಯಾಯಾಲಯಕ್ಕೆ ನಿಜಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಘಟನೆಯು ಸಂಜೆ 7.20 ಗಂಟೆ ಆಗಿರುತ್ತದೆ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದು ಆರೋಪಿ ನನಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 16.01.2018 ರಂದು ಆರೋಪಿತನು ಸದರಿ ದೂರನ್ನು

ನೀಡಿದ್ದರೂ ಸಹ ನಾನು ಅದನ್ನು ಪರಿಗಣಿಸುತ್ತೇನೆ ಎಂದು ಸುಳ್ಳು ಹೇಳಿ ಆರೋಪಿಯನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ವಿ ಟಿ ಎಂ ಮಷಿನ್ ನ ದಾಖಲಾತಿಯನ್ನು ಆರೋಪಿಯು ದೂರನ್ನು ನೀಡಿದಾಗ ಹಾಗೂ ಚಾಸಾ 17 ಮತ್ತು ಆರೋಪಿ ನನ್ನನ್ನು ಭೇಟಿ ಮಾಡಲು ಬಂದಾಗ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಿ ಟಿ ಎಂ ದಾಖಲಾತಿಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ 7.20 ಕ್ಕೆ ಗಣಂಗೂರು ಗೇಟ್ ದಾಟಿ ಹೋಗುತ್ತಿತ್ತು ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಸಹ ಹಾಗೂ ಬೇರೆ ವಾಹನದಿಂದ ಅಪಘಾತವಾಗಿರುವುದು ನನಗೆ ಗೊತ್ತಿದ್ದರೂ ಸಹ, ಮೃತರ ಕುಟುಂಬಕ್ಕೆ ಪರಿಹಾರ ಸಿಗಲಿ ಎಂಬ ದುರುದ್ದೇಶದಿಂದ ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವಾಹನದ ದಟ್ಟಣೆ ಇದ್ದು, ಹಾಗೂ ಜನ ಇರುವ ಪ್ರದೇಶ ವಿರುವ ಅಪಘಾತವಾದಲ್ಲಿ ವಾಹನವನ್ನು ಸಾರ್ವಜನಿಕರು ತಡೆ ಹಿಡಿಯುತ್ತಾರೆ ಎಂದರೆ ಸಾಕ್ಷಿ ಬಸ್ ನಿಲ್ಲಿಸಿದ್ದಲ್ಲಿ ಆ ರೀತಿ ಆಗುತ್ತದೆ ಅಥವಾ ಆ ರೀತಿ ಆಗಲು ಬಹುದು ಎಂದು ನುಡಿಯುತ್ತಾರೆ.

4. ಐ ಎಂ ವಿ ಮಾಡಿಸಲು ನಾನು ಎಲ್ಲಾ ದಾಖಲಾತಿಯನ್ನು ನೀಡಿರುವುದಿಲ್ಲ. ನಾನು ಪೊಟೋವನ್ನು ಐ ಎಂ ವಿ ಮಾಡಿಸಲು ನೀಡಿರುವುದಿಲ್ಲ. ಸಾಕ್ಷಿ ಅವರೇ ಬಂದು ಪೊಟೋ ತೆಗೆದುಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ನಾನು ದಾಖಲಾತಿಯನ್ನು ಸರಿಯಾಗಿ ಪರಿಶೀಲಿಸದೇ ಮೃತರ ಕುಟುಂಬಕ್ಕೆ ಅನುವಕೂಲವಾಗಲಿ ಎಂಬ ದುರುದ್ದೇಶದಿಂದ ಸುಳ್ಳು

ಅಂತಿಮ ವರದಿಯನ್ನು ಆರೋಪಿಯ ವಿರುದ್ದ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಚಾಲಕನ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 7.20 ಗಂಟೆಗೆ ಗಣಂಗೂರು ಗೇಟ್ ಬಳಿ ಹೋಗುತ್ತಿದ್ದ ಆರೋಪಿಯ ಬಸ್ ಅನ್ನು ಮಂಡ್ಯ ಪೊಲೀಸರು ತಡೆದು ತದನಂತರ ಯಾವುದೇ ಸಾಕ್ಷ್ಯ ಇಲ್ಲ ಎಂದು ಬಸ್ ಮುಂದೆ ಹೋಗಲು ಬಿಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಠಾಣಾ ಅಂಕೆ ಸಂಖ್ಯೆಯನ್ನು ಹೆಚ್ಚಿಸಲು ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ನನಗೆ ತಿಳಿದಿದ್ದರೂ ಸಹ ಆತನ ವಿರುದ್ದ ಸಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*